**ಕರ್ನಾಟಕ ವಿಧಾನ ಪರಿಷತ್ತು**

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1697
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್
3. ಉತ್ತರಿಸಬೇಕಾದ ದಿನಾಂಕ : 14.03.2022
4. ಉತ್ತರಿಸಬೇಕಾದ ಸಚಿವರು : ಮಾನ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ ಪ್ರವಾಸೋದ್ಯಮ ಸಚಿವರು

<table>
<tr>
<td>ಅ</td>
<td>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ Consent for Operation ಗೆ ಕೆಂಪು ಬಣ್ಣಕ್ಕೆ 05 ವರ್ಷದ ಶುಲ್ಕವನ್ನು ಕಿತ್ತಳೆ ಬಣ್ಣಕ್ಕೆ 10 ವರ್ಷದ ಶುಲ್ಕವನ್ನು ಹಸಿರು ಬಣ್ಣಕ್ಕೆ 10 ವರ್ಷದ ಶುಲ್ಕವನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ಬಂದಿದೆ.<br><br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವ್ಯಾಪ್ತಿಗೆ ಒಳಪಡುವ ಹಸಿರು, ಕಿತ್ತಳೆ ಮತ್ತು ಕೆಂಪು ವರ್ಗಗಳ ಕೈಗಾರಿಕೆಗಳಿಗೆ/ಉದ್ದಿಮೆಗಳಿಗೆ/ಸಂಸ್ಥೆಗಳಿಗೆ ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1974 ರ ಸೆಕ್ಷನ್ 25/26 ರಡಿಯಲ್ಲಿ ಹಾಗು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981ರ ಸೆಕ್ಷನ್ 21/22 ರಡಿಯಲ್ಲಿ ರಡಿಯಲ್ಲಿ ಕಲ್ಪಿಸಲಾದ ಅವಕಾಶಗಳನ್ವಯ ಸ್ಥಾಪನಾ ಸಮ್ಮತಿ ಪತ್ರ/ಚಾಲನಾ ಸಮ್ಮತಿ ಪತ್ರವನ್ನು ("Consent for operation/Consent to Establish") ನೀಡಲಾಗುತ್ತಿದೆ.<br><br>ಮಂಡಳಿಯಿಂದ ಚಾಲನಾ ಸಮ್ಮತಿ ಪತ್ರ (Consent for Operation) ನೀಡಲು ಕೆಂಪು ವರ್ಗಕ್ಕೆ 05 ವರ್ಷದ ಶುಲ್ಕ (05 ವರ್ಷದ ಸಿಂಧುತ್ವ) ಕಿತ್ತಳೆ ವರ್ಗಕ್ಕೆ 10 ವರ್ಷದ ಶುಲ್ಕ (10 ವರ್ಷದ ಸಿಂಧುತ್ವ) ಹಸಿರು ವರ್ಗಕ್ಕೆ 10 ವರ್ಷದ ಶುಲ್ಕ (15 ವರ್ಷದ ಸಿಂಧುತ್ವ) ಬೃಹತ್ ಹಾಗು ಮಧ್ಯಮ ವರ್ಗದ ಉದ್ದಿಮೆಗಳಿಗೆ ಅನ್ವಯವಾಗುತ್ತದೆ. ಸರ್ಕಾರದ ಪರಿಷ್ಕೃತ ಸಮ್ಮತಿ ಶುಲ್ಕದ ಅಧಿಸೂಚನೆ ದಿನಾಂಕ 29.10.2020 ರಂತೆ, ಕೆಂಪು, ಕಿತ್ತಳೆ ಹಾಗು ಹಸಿರು ವರ್ಗಕ್ಕೆ ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವಂತೆ ಶುಲ್ಕವನ್ನು ವಿಧಿಸಲಾಗಿದೆ.<br><br>
<table>
<tr><th rowspan="2">Category</th><th colspan="3">Consent Validity period</th></tr>
<tr><th>Red</th><th>Orange</th><th>Green</th></tr>
<tr><td>Large</td><td>5 years (5 years fee)</td><td>10 years (10 years fee)</td><td>15 years (10 years fee)</td></tr>
<tr><td>Medium</td><td>5 years (5 years fee)</td><td>10 years (10 years fee)</td><td>15 years (10 years fee)</td></tr>
<tr><td>Small</td><td>5 years (3 years fee)</td><td>10 years (6 years fee)</td><td>15 years (1 year fee)</td></tr>
<tr><td>Micro (<25 lakhs)</td><td>5 years (1 year fee)</td><td>10 years (1 year fee)</td><td>One time permanent consent (1 year fee)</td></tr>
</table>
</td>
</tr>
</table>

| | | |
|---|---|---|
| ಆ | ಈ ರೀತಿ ಶುಲ್ಕವನ್ನು 10 ವರ್ಷಗಳಿಗೆ ಕಟ್ಟುವುದರಿಂದ, ಕಾರ್ಖಾನೆಗಳಿಗೆ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ | ಹಾಲಿ ಇರುವ ಶುಲ್ಕ ಹಾಗೂ 10 ವರ್ಷಗಳ ಕಾಲಮಿತಿಯನ್ನು ಸಡಿಲಗೊಳಿಸಿ, ಕಾರ್ಖಾನೆಗಳಿಗೆ ಅನುಕೂಲವಾಗುವಂತೆ ಸರ್ಕಾರ ಕೈಗೊಂಡ ಕ್ರಮಗಳೇನು? | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1974 ರಡಿಯಲ್ಲಿ ಸ್ಥಾಪನೆಗೊಂಡಿದ್ದು, ಸಮ್ಮತಿ ಅರ್ಜಿಗಳಿಗೆ ಸಮ್ಮತಿ ಶುಲ್ಕವನ್ನು Karnataka State Board for Prevention and Control of Water Pollution (Procedure for Transaction of Business) and The Water (Prevention and Control of Pollution) Rules, 1976 ರಡಿಯಲ್ಲಿ ಮೊಟ್ಟ ಮೊದಲ ಬಾರಿಗೆ 1983 ರಲ್ಲಿ ಅಧಿಸೂಚಿಸಲಾಗಿದ್ದು, ನಂತರ 1991, 1996 & 1998 ರಲ್ಲಿ ಸಮ್ಮತಿ ಶುಲ್ಕವನ್ನು ಪರಿಷ್ಕರಿಸಲಾಗಿರುತ್ತದೆ.<br><br>iDeck (Infrastructure Development Corporation (Karnataka) Limited) ಸಂಸ್ಥೆ ನೀಡಿದ "Assessment of Consent fee keeping in view of objectives of the Board" ವರದಿಯನ್ನಾಧರಿಸಿ ಹಾಗೂ ಸರ್ಕಾರದ ಸಲಹೆಯಂತೆ Consumer Price Index ನ್ನು ಗಣನೆಗೆ ತೆಗೆದುಕೊಂಡು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 22 ವರ್ಷಗಳ ನಂತರ ಸಮ್ಮತಿ ಶುಲ್ಕ ಪರಿಷ್ಕರಣೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, Karnataka State Board for Prevention and Control of Water Pollution (Procedure for Transaction of Business) and The Water (Prevention and Control of Pollution) Rules, 1976 ನ ನಿಯಮ 32 ಕ್ಕೆ ತಿದ್ದುಪಡಿಯನ್ನು ಹಾಗೂ ಕರ್ನಾಟಕ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ನಿಯಮಗಳು, 1983 ನಿಯಮ 20 ಕ್ಕೆ ತಿದ್ದುಪಡಿ ತರಲು ದಿನಾಂಕ:29.10.2020 ರಂದು ಅನುಕ್ರಮವಾಗಿ ಅಧಿಸೂಚನೆ ಸಂಖ್ಯೆ: ಅಪಜೀ 251 ಇಪಿಸಿ 2016(i) ಹಾಗೂ ಅಪಜೀ 251 ಇಪಿಸಿ 2016 (ii) ಗಳಲ್ಲಿ ಹೊರಡಿಸಲಾಗಿರುತ್ತದೆ.<br><br>ಈ ಮಧ್ಯೆ, ದಿನಾಂಕ:29.10.2020 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಅಪಜೀ 251 ಇಪಿಸಿ 2016 ಗಳ ಬಗ್ಗೆ ಕೋವಿಡ್ – 19 ಲಾಕ್ ಡೌನ್ ಹಾಗೂ ಉದ್ಯಮಗಳ ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಹೆಚ್ಚಿನ ಕೈಗಾರಿಕೆಗಳು ಕೈಗಾರಿಕಾ ಸಂಘಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದವು. ಸದರಿ ಮನವಿಗಳನ್ನು ಪರಿಶೀಲಿಸಿ, ನೆರೆ ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳಲ್ಲಿ ಹಾಲಿ ಇರುವ |

| | | |
|---|---|---|
| | | ಸಮ್ಮತಿ ಶುಲ್ಕದ ವಿವರಗಳನ್ನು ಪಡೆದು, ಅವುಗಳ ತುಲನಾತ್ಮಕ ಪಟ್ಟಿ ತಯಾರಿಸಿ, ಅಧ್ಯಯನ ನಡೆಸಿ, ಕೈಗಾರಿಕೆಗಳ ಕಾರ್ಯಚಟುವಟಿಕೆಗಳ ಅನುಕೂಲಕ್ಕಾಗಿ ಸಮ್ಮತಿ ಶುಲ್ಕವನ್ನು ಪರಿಷ್ಕರಿಸಲು ಮಂಡಳಿಯು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಗಣಿಸಿ, ದಿನಾಂಕ 22.10.2021 ರಂದು ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಿ, ಸಮ್ಮತಿ ಶುಲ್ಕವನ್ನು ಇಳಿಕೆ ಮಾಡಲಾಗಿದೆ.<br><br>ಮುಂದುವರೆದು, "Karnataka Iron and Steel Manufacturer's Association, Bellary District, Karnataka" ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 21080/2021 ನಲ್ಲಿ ಸಮ್ಮತಿ ಶುಲ್ಕ ಹೆಚ್ಚಳವನ್ನು ಪ್ರಶ್ನಿಸಿದ್ದು, ಸದರಿ ರಿಟ್ ಅರ್ಜಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿ ಇರುತ್ತದೆ.<br><br>ಈ ಮಧ್ಯೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಚಾಲನೆಯಲ್ಲಿರುವ ಕಾರ್ಖಾನೆಗಳಿಗೆ ಪೂರ್ತಿ ಶುಲ್ಕವನ್ನು (05, 10, 15 ವರ್ಷಗಳ) ಪಾವತಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ಕಾರ್ಖಾನೆಗಳು ಕೋರಿರುವ ಕಾಲಾವಕಾಶವು ಸೂಕ್ತವಾಗಿದೆಯೆಂದು ಪರಿಶೀಲಿಸಿದ ನಂತರ ಪ್ರಸ್ತಾವನೆಗಳ ಅರ್ಹತೆಯ ಆಧಾರದ ಮೇಲೆ, ಸದರಿ ಕಾರ್ಖಾನೆಗಳು ಕೇಳಿರುವ ನಿರ್ದಿಷ್ಟ ಅವಧಿಯ ಶುಲ್ಕವನ್ನು ಹಾಗು ನಿರ್ದಿಷ್ಟ ಅವಧಿಗೆ ಚಾಲನಾ ಪತ್ರವನ್ನು (Consent for Operation) ನೀಡಲು ಅನುವಾಗುವಂತೆ Karnataka State Board for Prevention and Control of Water Pollution (Procedure for Transaction of Business) and The Water (Prevention and Control of Pollution) Rules, 1976 ಕ್ಕೆ ತಿದ್ದುಪಡಿ ತರಲು ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: ಅಪಜೀ 72 ಇಪಿಸಿ 2022

(ಆನಂದ್ ಸಿಂಗ್)
ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ
ಪ್ರವಾಸೋದ್ಯಮ ಸಚಿವರು

ಆನಂದ್ ಸಿಂಗ್
ಪ್ರವಾಸೋದ್ಯಮ,
ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು